ವಿಲ್ಲ ಅವರು ಕೂಡ ಲಾಯರ್ ಇದ್ದಾರೆ. ಅವರಿಗೂ ಇದೆಲ್ಲಾ ಗೊತ್ತಿದೆ. ಆದರೂ ಈ ಒಂದು ಹಾದವನ್ನು ಇಟ್ಟಿದ್ದಾರೆ. ಆದರೆ ಅದು ಸರಿಯಲ್ಲ.

ಶ್ರೀ ವಿ. ದನಂಜಯ ಕುಮಾರ್ --ಇದರಲ್ಲಿ ದಲಿತರು ಮೃತರಾಗಿದ್ದಾರೆ. ಆದ್ದರಿಂದ ಸರ್ಕಾರದ ವರು ಸಿ. ಒ. ಡಿ. ತನಿಖೆ ನಡೆಸದಿದ್ದರೆ ಆ ಜನರಿಗೆ ನ್ಯಾಯ ಸಿಗುವುದಿಲ್ಲ. ಆದ್ದರಿಂದ ಈ ಬಗ್ಗೆ ಸಂಬಂಧ ಪಟ್ಟ ಮಂತ್ರಿಗಳು ಉತ್ತರ ಕೊಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.--ಕಾನೂನು ಮಂತ್ರಿಗಳೇ ಉತ್ತರ ಕೊಟ್ಟಿದ್ದಾರೆ. ಇನ್ನು ಸಾಕು ಬಿಡಿ ಅವರು ಕ್ರಮ ತೆಗೆದುಕೊಳ್ಳುತ್ತಾರೆ

(v) ಶಾಲೆಗಳಿಗೆ ಉಪಾಧ್ಯಾಯರುಗಳನ್ನು ನೇಮಕ ಮಾಡುವ ಬಗ್ಗೆ

ಶ್ರೀ ವೈ. ಕೆ. ರಾಮಯ್ಯ.---ಮಾನ್ಯ ಅಧ್ಯಕ್ಷರೇ, ಕಳೆದ ಸಲ ನಾನು ನನ್ನ ಕ್ಷೇತ್ರಕ್ಕೆ ಹೋದಾಗ ಅನೇಕ ಹಳ್ಳಿಗಳಲ್ಲಿ ಮಕ್ಕಳನ್ನು ಅಲ್ಲಿನ ಶಾಲೆಗಳಲ್ಲಿ ಕುರಿಗಳಂತೆ ಕೂಡಿ ಹಾಕಿದ್ದರು. ನಾಲ್ಕೈದು ಜನ ಉಪಾಧ್ಯಾಯರು ಇರಬೇಕಾದ ಕಡೆಗಳಲ್ಲಿ ಒಬ್ಬೊಬ್ಬರೇ ಇದ್ದರು. ಇಂತಹ ಪರಿಸ್ಥಿತಿಯನ್ನು ನಾನು ಅನೇಕ ಕಡೆ ನೋಡಿದ್ದೇನೆ. ಈ ದೇಶದ ಮಕ್ಕಳಿಗೆ ನಾಲ್ಕು ಅಕ್ಷರವನ್ನಾದರೂ ಕಲಿಸಲು ಉಪಾಧ್ಯಾಯರನ್ನು ನೇಮಿಸಲು ಸಾಧ್ಯವಿಲ್ಲವೇ ? ಈಗಿನ ವ್ಯವಸ್ಥೆಯನ್ನು ನೋಡಿ ನನಗೆ ವ್ಯಥೆಯಾಗಿದೆ. ಕಾಂಟ್ರಾಕ್ಟ್ ಬೇಸಿಸ್ ಮೇಲೆ ಉಪಾಧ್ಯಾಯರನ್ನು ನೇಮಕ ಮಾಡಿಕೊಳ್ಳಲು ಸರ್ಕಾರ ಮನಸ್ಸು ಮಾಡಿದಾಗ ಕೋರ್ಟಿನಿಂದ ಅದಕ್ಕೆ ಅಡ್ಡಿಯಾಯಿತು. ನಂತರ ನೇಮಕಾತಿ ಸಮಿತಿಗಳನ್ನು ರಚಿಸಲಾಯಿತು. ಈಗ ಯಾವುದೋ ಕಾರಣಕ್ಕಾಗಿ ಈ ಸಮಿತಿಗಳ ಕೆಲಸಕಾರ್ಯಗಳನ್ನೂ ಸಹ ಸರ್ಕಾರ ಸ್ಥಗಿತಗೊಳಿಸಿದೆ ಇದಕ್ಕೆ ಕಾರಣ ಏನು ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಿದರು. ಮುಂದಿನ ವರ್ಷ ಶಾಲೆಗಳ ಪ್ರಾರಂಭವಾಗುವುದರೊಳಗಾಗಿಯಾದರೂ ಎಲ್ಲಾ ಶಾಲೆಗಳಿಗೂ ಉಪಾಧ್ಯಾಯರುಗಳನ್ನು ನೇಮಕ ಮಾಡಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ತಿಳಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.--ಮಾನ್ಯ ಅಧ್ಯಕ್ಷರೇ, ಯಾವ ಹಿನ್ನೆಲೆಯಲ್ಲಿ ಈ ನೇಮಕಾತಿ ಸಮಿತಿಗಳನ್ನು ರದ್ದು ಪಡಿಸಬೇಕಾಯಿತು ಎಂಬುದು ಮಾನ್ಯ ರಾಮಯ್ಯನವರಿಗೂ ಗೊತ್ತಿದೆ. ಇದಕ್ಕೆ ಸಂಬಂಧ ಪಟ್ಟ ಒಂದು ಆಜ್ಞೆಯನ್ನು ಹೊರಡಿಸಲಾಗಿದೆ ಎಂದು ಮಾನ್ಯ ವಿದ್ಯಾಮಂತ್ರಿಗಳು ನನ್ನೆ ತಿಳಿಸಿದ್ದಾರೆ ಇದರಿಂದ ಉದ್ಭವವಾಗತಕ್ಕಂತಹ ಪರಿಸ್ಥಿತಿಯನ್ನು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ಮಕ್ಕಳಿಗೆ ತೊಂದರೆಯಾಗದ ರೀತಿಯಲ್ಲಿ ಆದಷ್ಟು ಬೇಗ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸೂಕ್ತ ಕಾರ್ಯಕ್ರಮ ಕೈಗೊಳ್ಳುತ್ತೇವೆಂದು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ --13 ಸಾವಿರ ಜನ ಉಪಾಧ್ಯಾಯರ ಹುದ್ದೆಗಳು ಖಾಲಿಯಿವೆ. 7 ಸಾವಿರ ಹುದ್ದೆಗಳನ್ನು ಭರ್ತಿಮಾಡಲಿಕ್ಕೆ ತಯಾರಾಗಿದ್ದೇವೆಂದು ಮಾನ್ಯ ಶಿಕ್ಷಣ ಸಚಿವರು ಹೇಳಿದ್ದರು. ಈಗ ಜಿಲ್ಲಾ ಮಟ್ಟದ ನೇಮಕಾತಿ ಸಮಿತಿಗಳನ್ನು ಯಾವುದೋ ತಕರಾರು ಬಂದಿದ್ದರಿಂದ ರದ್ದುಮಾಡಿದ್ದೇವೆಂದು ಹೇಳಿದ್ದಾರೆ.

ಅಧ್ಯಕ್ಷರು.--ತಕರಾರನ್ನು ನೀವೇ ಮಾಡುತ್ತೀರಿ?

ಶ್ರೀ ಎಂ. ಎಸ್. ಕೃಷ್ಣನ್ --ಮಾನ್ಯ ಸದಸ್ಯರಾದ ರಾಮಯ್ಯನವರು ಹೇಳಿದ್ದು ಸರಿ. ನಿಮ್ಮ ಪಾಲಿಸಿ ಸರಿಯಿಲ್ಲ.

ಶ್ರೀ ವೈ. ಕೆ. ರಾಮಯ್ಯ.--ನನಗೆ ಸರ್ಕಾರದಿಂದ ಸ್ಪಷ್ಟವಾಗಿ ಉತ್ತರ ಬರಬೇಕು. ಮುಂದಿನ ವರ್ಷ ಶಾಲೆ ಪ್ರಾರಂಭವಾಗುವುದರೊಳಗೆ ಉಪಾಧ್ಯಾಯರುಗಳನ್ನು ನೇಮಿಸುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಯೆ ? ಆದರ ಬಗ್ಗೆ ಸ್ಪಷ್ಟವಾಗಿ ಉತ್ತರ ಕೊಡಬೇಕಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.--ಮಾನ್ಯ ಸದಸ್ಯರುಗಳಿಗೆ ಸಮಸ್ಯೆಗಳು ಗೊತ್ತಿದೆ. ಸಮಸ್ಯೆಯ ಗಾತ್ರವೂ ಗೊತ್ತಿದೆ ಮುಂದಿನ ವರ್ಷ ಶಾಲೆ ಪ್ರಾರಂಭವಾಗುವುದರೊಳಗೆ ಇರತಕ್ಕ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಬೇಗ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ನಾನು ಈಗಾಗಲೇ ಹೇಳಿದ್ದೇನೆ. ಮತ್ತೊಮ್ಮೆ ಹೇಳುತ್ತೇನೆ.

LEGISLATIVE BUSINESS

The Karnataka Contingency Fund [Amendment] Bill, 1984

Motion to consider